ಇಲಾಖೆ / ವಿಷಯ : DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWS PAPER: ವಿಶ್ವವಾಣಿ    ದಿನಾಂಕ : DATE : 2/6/202

# ಕರೋನಾ ವಿರುದ್ಧದ ಹೋರಾಟದಲ್ಲಿ ಮೋದಿ ಪಾತ್ರ ಮಹತ್ವ: ಬಿಎಸ್‌ವೈ

2/6/20

**ವಿಶ್ವವಾಣಿ ಸುದ್ದಿಮನೆ** ಬೆಂಗಳೂರು

- **ಪ್ರಧಾನಿ ನರೇಂದ್ರ ಮೋದಿ ಅವರ ಆಡಳಿತಕ್ಕೆ ಸಿಎಂ ಶಹಬಾಸ್‌ಗಿರಿ**
- **ಮೋದಿ ಅವರನ್ನು ಕಾಯಕಯೋಗಿ ಎಂದು ಹೊಗಳಿದ ಮುಖ್ಯಮಂತ್ರಿ**
- **ಸ್ವಾವಲಂಬಿ ಭಾರತ ದೇಶಕ್ಕೆ ಪೂರಕ**



ದೇಶ ಕಟ್ಟುವ ಕಾಯಕಕ್ಕೆ ತಮ್ಮನ್ನು ತಾನೆ ಅರ್ಪಿಸಿಕೊಂಡ ಮೋದಿ ಅವರು, ಹಲವು ದಶಕದಿಂದ ತುಕ್ಕು ಹಿಡಿದಿದ್ದ ಆಡಳಿತ ವ್ಯವಸ್ಥೆಯಲ್ಲಿ ಸುಧಾರಣೆ ತಂದಿದ್ದಾರೆ. ಭ್ರಷ್ಟಾಚಾರಕ್ಕೆ ಕಡಿವಾಣ, ಕರ್ತವ್ಯ ನಿಷ್ಠೆ, ತಂತ್ರಜ್ಞಾನ ಅಳವಡಿಕೆ, ಪಾರದರ್ಶಕತೆ ಅಳವಡಿಸಿಕೊಂಡ 'ಕಾಯಕಯೋಗಿ 'ಎಂದು ಮುಖ್ಯಮಂತ್ರಿ ಯಡಿಯೂರಪ್ಪ ಅವರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಶಹಬಾಸ್ ಗಿರಿ ನೀಡಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದೇಶದ ಶೇ.70 ರಷ್ಟು ಜನರ ಅಪೇಕ್ಷೆ, ಮತ್ತೊಂದು ಅವಧಿಗೆ ಮೋದಿ ಅವರು ಪ್ರಧಾನಿ [illegible]ದಾಗಿತ್ತು. ಆಗ ಮಾತ್ರ ದೇಶದ ಅನೇಕ ಜ್ವಲಂತ ಸಮಸ್ಯೆಗಳಿಗೆ ಪರಿಹಾರ ಸಾಧ್ಯ ಎನ್ನುವ ಭಾವನೆ ಜನರಲ್ಲಿತ್ತು: ಐದು ವರ್ಷಗಳ ಆಡಳಿತದಲ್ಲಿ ಜನಧನ್, ಆಯುಷ್ಮಾನ್ ಭಾರತ್, ಜನರಿಕ್, ಬೇವು ಮಿಶ್ರಿತ ರಸಗೊಬ್ಬರ, ಮುದ್ರಾ, ಸ್ಟಾರ್ಟ್ ಅಪ್ ಇಂಡಿಯಾ ಸೇರಿ ಹಲವಾರು ಕಾರ್ಯಕ್ರಮ ರೂಪಿಸಿ ದೇಶದ ಅಭಿವೃದ್ಧಿಗೆ ಶ್ರಮಿಸಿದ ಮೋದಿ ಅವರು ಎರಡನೇ ಬಾರಿಗೆ ಚುನಾವಣೆ ಎದುರಿಸಿದರು. ದೇಶದ ಜನತೆ 2019 ರಲ್ಲಿ ಬಿಜೆಪಿಗೆ 303, 353 ಸ್ಥಾನ ಎನ್‌ಡಿಎಗೆ ನೀಡಿ ಸ್ಥಿರ ಸರಕಾರ ರಚಿಸಲು ಆಶೀರ್ವಾದ ಮಾಡಿದರು ಎಂದರು.

**ಮೋದಿ ಅಲೆಯಲ್ಲಿ ಸೋಲು:** ರಾಜ್ಯದಲ್ಲಿ ಘಟಾನುಘಟಿ ನಾಯಕರಾದ ಮಲ್ಲಿಕಾರ್ಜುನ ಖರ್ಗೆ, ಕೆ.ಎಚ್. ಮುನಿಯಪ್ಪ, ಎಚ್.ಡಿ.ದೇವೇಗೌಡರಂತಹ ನಾಯಕರು ಕೂಡ ಮೋದಿ ಅಲೆಯಲ್ಲಿ ಸೋಲನ್ನು ಅನುಭವಿಸಿದರು. ರಾಜ್ಯದಲ್ಲಿ ಬಿಜೆಪಿ 25 ಸ್ಥಾನ ಗೆಲ್ಲಲು ಕಾರಣವಾಯಿತು ಎಂದರು.

ಎರಡನೇ ಅವಧಿಯ ಆರಂಭದಲ್ಲಿ ಪ್ರಧಾನಿಯವರು ದೇಶದ ಸುರಕ್ಷತೆ, ದಶಕದ ಸಮಸ್ಯೆಗಳ ಪರಿಹಾರಕ್ಕೆ ದೃಢ ಸಂಕಲ್ಪದ ಘೋಷಣೆ ಮಾಡಿದ್ದಾರೆ. ಎರಡನೇ ಅವಧಿಯ ಆರಂಭದಲ್ಲೇ ದೇಶದ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಸುವರ್ಣ ಯುಗ ಆರಂಭವಾಗಿದೆ. ರಾಮಮಂದಿರ ತೀರ್ಪಿಗಾಗಿ ನಿರಂತರ ಕಾನೂನು ಹೋರಾಟ ಮಾಡಿದರು. ಇದರಿಂದ ದಶಕಗಳ ಕಾಲ ಬಾಕಿ ಉಳಿದಿದ್ದ ತೀರ್ಪು ಹೊರಬಿತ್ತು. ನೂರಾರು ವರ್ಷಗಳಿಂದ ಜಾರಿಯಲ್ಲಿದ್ದ ತ್ರಿವಳಿ ತಲಾಖ್ ಎಂಬ ಕೆಟ್ಟ ಸಂಪ್ರದಾಯಕ್ಕೆ ತಿಲಾಂಜಲಿ ನೀಡಲಾಯಿತು, ಉಗ್ರರನ್ನು ನಿಗ್ರಹಿಸಲಾಯಿತು. ಉಗ್ರರ ಬೆಂಬಲಕ್ಕೆ ಇದ್ದ ಸೌಲಭ್ಯ ಬಂದ್ ಮಾಡಿ, ಕಠಿಣ ಕಾನೂನು ಜಾರಿ ಮಾಡಲಾಯಿತು ಎಂದು ಹೇಳಿದರು.

ಕರೋನಾಕ್ಕೆ 20 ಲಕ್ಷ ಕೋಟಿ ಪ್ಯಾಕೇಜ್ ನೀಡಿದ್ದಾರೆ. 8 ಲಕ್ಷ ಆಹಾರ ಪದಾರ್ಥಗಳನ್ನು ರಾಜ್ಯಕ್ಕೆ ನೀಡಿದ್ದಾರೆ. ರಾಜ್ಯ ಕೂಡ 1610 ಕೋಟಿ ರು. ಪ್ಯಾಕೇಜ್ ಘೋಷಣೆ ಮಾಡಿದೆ. ಇದಾದ ಬಳಿಕ 137ಕೋಟಿ, ಮತ್ತೆ 500 ಕೋಟಿ ಮೂರು ಪ್ಯಾಕೇಜ್ ನೀಡಿದೆ. ಮಹಾರಾಷ್ಟ್ರದಿಂದ ಬಂದವರಿಗೆ ಸಾಂಸ್ಥಿಕ ಕ್ವಾರಂಟೈನ್ ಕಡ್ಡಾಯವಾಗಿದ್ದು, ಬೇರೆ ರಾಜ್ಯದಿಂದ ಬಂದವರನ್ನು ಹೋಂ ಕ್ವಾರಂಟೈನ್‌ಗೆ ಕಳುಹಿಸಲಾಗುವುದು ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.